# ಧರ್ಮವೆಂಬ ಸಂಬಳವ ಗಳಿಸಿಕೊಳ್ಳಿರೊ

1. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 295.
2. **Ref.:** Purandara Sahitya Darshana, Samputa 3, Samaja Darshana edited by Prof. S.K. Ramachandra Rao, page No. 275.
3. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 27.
4. **Note:** Lyrics given here are as per Ref. 1. The wordings in Ref. 2 are same as in Ref. 1. The wordings in Ref. 3 same as in Ref. 1 with few minor differences which are not considered here.
5. **Note:** Singer has followed these lyrics.

ರಾಗ: ಪಂತುವರಾಳಿ ತಾಳ: ಆದಿ

ಧರ್ಮವೆಂಬ ಸಂಬಳವ ಗಳಿಸಿಕೊಳ್ಳಿರೊ
ಪೆರ್ಮೆಯಿಂ ದೇಹವ ನಂಬಬೇಡಿ ಕಾಣಿರೊ || ಪ ||

ಅಟ್ಟ ಅಡುಗೆ ಉಣಲು ಬಿಡನು
ಕೊಟ್ಟ ಸಾಲ ಕೇಳ ಬಿಡನು
ಪೆಟ್ಟಿಗೆಯೊಳಗಿದ್ದ ಚಿನ್ನವ
ತೊಟ್ಟೇನೆಂದರೆ ಯಮನು ಬಿಡನು || 1 ||

ಅಕ್ಕನಿಲ್ಲಿ ಕರೆಯಲಿಲ್ಲ
ಮಕ್ಕಳನ್ನು ಪಡೆಯಲಿಲ್ಲ
ದುಃಖಗೊಂಡು ಕಣ್ಣೀರನು
ಉಕ್ಕಿಸಿದರೆ ಬಿಡನು ಯಮನು || 2 ||

ಪೇಳ್ವ ನೆಂಟರಿಂಗೆ ಕರೆದು
ಬೇಳೆ ಬೆಲ್ಲವನ್ನು ತಂದು
ನಾಳೆ ಮಗನ ಮದುವೆ ಎಂದು

ತಾಳು ಎಂದರೆ ಯಮನು ಬಿಡನು || 3 ||

ಮಾಳಿಗೆ ಮನೆಯಿರಲಿ
ಜಾಳಿಗೆ ತುಂಬ ಹೊನ್ನಿರಲಿ
ಆಳು ಮಂದಿ ಶಾನೆಯಿರಲಿ
ಕಾಲನು ತಾ ಬೆನ್ನ ಬಿಡನು || 4 ||

ಅರ್ತಿಯಿಂದ ಸಂಸಾರವ
ವ್ಯರ್ಥವಾಗಿ ನೆಚ್ಚಬೇಡಿ
ಕರ್ತು ಪುರಂದರ ವಿಠಲನ್ನ
ಭಕ್ತಿಯಿಂದಲೆ ಭಜಿಸಿರೊ || 5 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಸಾವಿನ ಅನಿವಾರ್ಯತೆಯ ಬೆಳಕಿನಲ್ಲಿ ಧರ್ಮದ ಉಜ್ವಲ ಪಾತ್ರವನ್ನು ಇಲ್ಲಿ ಚಿತ್ರಿಸಲಾಗಿದೆ.

**ಪೆರ್ಮೆ** – ಹೆಮ್ಮೆ.

**ಜಾಳಿಗೆ** – ಕೈಚೀಲ.

**ಅರ್ತಿ** – ಪ್ರೀತಿ.

**Classification:** Keerthane
**Ankita:** purandara vittala
**Location:** NA
**Category:** Vidhi Chintane, Vairagya
**Sub-Category:** dharma, sambala, aduge, oota, bangara, yama, makkalu, dukha, bandhu, bella, maga, maduve, mane, samsara, bhajane, vairagya,
**Pravachana:** NA
**Explanation:** NA